

# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಲಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 254 | Pages. 2 | Date: 22-08-2025, FRIDAY | RNI NO: KARKAN/2024/89601 | Kannada Daily

ಸಂಪುಟ : 01 - ಸಂಚಿಕೆ : 254 - ಪುಟಗಳು : 2 22-08-2025 ಶುಕ್ರವಾರ | Ph: 8762954248 | ದರ : ₹1


# ಡ್ರಗ್ಸ್ ಹಾವಳಿ ನಿಲ್ಲಿಸಿದರೆ ಮೋದಿಗೆ ಸಲಾಂ

## ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ್ | ಸಕಲೇಶಪುರದಲ್ಲಿ ಡ್ರಗ್ಸ್ ಮುಕ್ತ ಭಾರತ ಆಂದೋಲನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಪ್ರಧಾನಿ ನರೇಂದ್ರ ಮೋದಿ ಅವರು ದೇಶಾದ್ಯಂತ ಡ್ರಗ್ಸ್‌ನಂತಹ ಅಮಲು ಪದಾರ್ಥಗಳನ್ನು ಶಾಶ್ವತವಾಗಿ ಬ್ಯಾನ್ ಮಾಡಿದರೆ ಸಾವಿರ ಸಲ ಸಲಾಂ ಹೊಡೆಯುತ್ತೇನೆ ಎಂದು ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಹಾಗೂ ಶಾಸಕ ಬಿ.ಆರ್. ಪಾಟೀಲ್ ಹೇಳಿದರು.

ಪಟ್ಟಣದ ಒಕ್ಕಲಿಗರ ಸಮುದಾಯ ಭವನದಲ್ಲಿ ಗುರುವಾರ ನಡೆದ ಡ್ರಗ್ಸ್ ಮುಕ್ತ ಭಾರತ ಆಂದೋಲನದ ಅಧ್ಯಕ್ಷತೆ ವಹಿಸಿ ಮಾತನಾಡಿ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ರಾಜ್ಯದಲ್ಲಿ ಡ್ರಗ್ಸ್ ಮಾರಾಟ ಹಾಗೂ ಸೇವನೆಗೆ ಕಡಿವಾಣ ಹಾಕುವ ಕುರಿತು ಪ್ರಣಾಳಿಕೆಯಲ್ಲಿ ಪ್ರಕಟಿಸುವಂತೆ ಕೋರಿದ್ದಕ್ಕೆ ನಮ್ಮ ವರಿಷ್ಠರು ನಕ್ಕು ಸುಮ್ಮನಾಗಿದ್ದರು. ಚುನಾವಣಾ ಪ್ರಣಾಳಿಕೆಯಲ್ಲಿ ಡ್ರಗ್ಸ್ ನಿಷೇಧ ಸೇರಿಸಬೇಕೆಂದು ಕಾಂಗ್ರೆಸ್ ಉಸ್ತುವಾರಿ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರಲ್ಲಿ ಮನವಿ ಮಾಡಿದ್ದೆ. ಆಗ ಅವರು ನಕ್ಕು ಸುಮ್ಮನಾದರು. ಈ ವಿಚಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೂ ತಂದಿದ್ದೆ. ಪಾನ ನಿಷೇಧ ಕೇವಲ ಒಂದು ರಾಜ್ಯದಲ್ಲಿ ಮಾಡಿದರೆ ಸಾಲದು, ಇಡೀ ದೇಶದಲ್ಲೇ ಜಾರಿಯಾಗಬೇಕು ಎಂದು ಹೇಳಿದರು.



### ಬಡವರ ಶೋಷಣೆ ಬೇಡ

ಮದ್ಯ ಮಾರಾಟದಿಂದ ಸರ್ಕಾರಕ್ಕೆ ಸಾವಿರಾರು ಕೋಟಿ ರೂ. ಆದಾಯ ಬರುತ್ತಿದೆಯಾದರೂ ಅದು ಬಡವರ ಕಣ್ಣೀರಿನ ಮತ್ತು ಪಾಪದ ಹಣ. ಸಾರ್ವಜನಿಕರ ಆರೋಗ್ಯ ಹಾಗೂ ಹಣವನ್ನು ಕಿತ್ತುಕೊಳ್ಳುವುದು ಬೇಡ ಎನ್ನುವುದು ನನ್ನ ನಿಲುವು. ಈಗಲೂ ಅಂಗಡಿಗಳಲ್ಲಿ ಮದ್ಯ ಮಾರಾಟ ಮಾಡುತ್ತಾರೆ. ಈ ವಿಷಯದಲ್ಲಿ ನಾನು ಸರ್ಕಾರದ ಕಿವಿ ಹಿಂಡಲು ಹೋದರೆ ಮನೆಗೆ ಹೋಗಬೇಕಾಗಬಹುದು. ಆದರೂ ಯಾವುದಕ್ಕೂ ಹೆದರದೆ ಧೈರ್ಯವಾಗಿ ಮಾತನಾಡುತ್ತೇನೆ ಎಂದು ತಿಳಿಸಿದರು.

> ಅಮಲು ಪದಾರ್ಥಗಳ ಮಾರಾಟ ಜಾಗತಿಕ ಸಮಸ್ಯೆಯಾಗಿ ಬೆಳೆದು ಬಿಟ್ಟಿದೆ. ಯುವಕರನ್ನು ದುಶ್ಚಟಗಳ ದಾಸರನ್ನಾಗಿಸಿ ರಾಷ್ಟ್ರದ ಪ್ರಗತಿಗೆ ಅಡ್ಡಿಯಾಗುವ ಪ್ರಯತ್ನಗಳು ನಡೆಯುತ್ತಿವೆ. ಇದರ ವಿರುದ್ಧ ನಮ್ಮ ಸರ್ಕಾರ ಎಚ್ಚೆತ್ತು ಕಠಿಣ ಕ್ರಮ ಜರುಗಿಸಬೇಕು.
>
> **– ಎಚ್.ಎಂ. ವಿಶ್ವನಾಥ್, ಮಾಜಿ ಶಾಸಕ**

ಪ್ರಧಾನಿ ನರೇಂದ್ರ ಮೋದಿ ದೇಶದಲ್ಲಿ ಪಾನ ನಿಷೇಧ ಜಾರಿಗೆ ತರುತ್ತಾರೆಂದರೆ ಅವರಿಗೆ ನಾನು ಸಾವಿರ ಸಲಾಂ ಹೊಡೆಯುತ್ತೇನೆ. ರಾಜ್ಯ ಮಾತ್ರವಲ್ಲದೆ ಇಡೀ ದೇಶವನ್ನು ಡ್ರಗ್ಸ್ ಹಾಗು ಮದ್ಯ ಮುಕ್ತವಾಗಿಸಬೇಕೆಂದು ಒತ್ತಾಯಿಸಿದರು.

ಮಕ್ಕಳಿಗೆ ಶಿಕ್ಷಣ ಕೊಡಿಸಲು ಸಲಹೆ: ಮಹಾರಾಷ್ಟ್ರದ ಡ್ರಗ್ಸ್ ವಿರೋಧಿ ಹೋರಾಟಗಾರ ಅವಿನಾಶ್ ಕಾಕಡೆ ಮಾತನಾಡಿ, ಊರಿನ ತುಂಬಾ ನಶಾ ಮುಕ್ತ ಕೇಂದ್ರಗಳಿರಬೇಕೆ ಅಥವಾ ಯುವಕರು ನಶೆಯಲ್ಲಿ ಮುಳುಗುವಂತಹ ಸ್ಥಳಗಳಿರಬೇಕೆ ಎಂಬ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕಿದೆ. ಮನುಷ್ಯನಿಗೆ ಬೌದ್ಧಿಕ ಮತ್ತು ದೈಹಿಕ ಅಗತ್ಯಗಳಿವೆ. ರೊಟ್ಟಿ, ಶಿಕ್ಷಣ ಸೇರಿ ಮೂಲ ಅಗತ್ಯತೆಗಳೊಂದಿಗೆ ಯೋಚನಾ ಶಕ್ತಿ ಬೆಳೆಸುವ ಸಾಮರ್ಥ್ಯವೂ ಇರಬೇಕು ಎಂದು ಸಲಹೆ ನೀಡಿದರು.

ನಶೆಯಿಂದ ಮುಕ್ತವಾದಾಗ ಮಾತ್ರ ಸಮಾಜದಲ್ಲಿ ನೆಮ್ಮದಿ ಸಾಧ್ಯ. ಪೋಷಕರು ಶಿಕ್ಷಣ ಪಡೆದಿದ್ದರೆ ಅವರ ಮಕ್ಕಳು ಸಚ್ಚಾರಿತ್ರ್ಯವಂತರಾಗುತ್ತಾರೆ. ಮಕ್ಕಳು ನಶೆಯಲ್ಲಿ ತೊಡಗಿರುವವರ ನಡುವೆ ಬೆಳೆದರೆ, ಅವರನ್ನು ಅನುಸರಿಸಿ ಡ್ರಗ್ಸ್‌ಗೆ ಬಲಿಯಾಗುತ್ತಾರೆ. ಇದು ದೇಶಕ್ಕೆ ಮಾರಕವೆಂದು ಎಚ್ಚರಿಸಿದರು.

ಮಾಜಿ ಶಾಸಕ ಹೆಚ್.ಎಂ. ವಿಶ್ವನಾಥ್ ಮಾತನಾಡಿ, ಮಕ್ಕಳನ್ನು ಗುರಿಯಾಗಿಸಿ ಭಾರತವನ್ನು ಡ್ರಗ್ಸ್‌ನಲ್ಲಿ ಮುಳುಗಿಸಲು ದೊಡ್ಡ ದೇಶಗಳ ಸಂಚು ನಡೆಯುತ್ತಿದೆ ಎಂದರು. ಅಮೇರಿಕಾ ಸೇರಿ ಕೆಲವು ರಾಷ್ಟ್ರಗಳು ನಮ್ಮ ದೇಶದ ಮಕ್ಕಳನ್ನು ವ್ಯಸನಕ್ಕೆ ದಾಸರನ್ನಾಗಿಸುವ ಮೂಲಕ ರಾಷ್ಟ್ರವಿರೋಧಿ ಸಂಚು ರೂಪಿಸುತ್ತಿವೆ ಎಂದು ಆರೋಪಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಗಾಂಧಿವಾದಿ ಪ್ರಸನ್ನ ಮಾತನಾಡಿ, ಮಾದಕ ವಸ್ತು ಮುಕ್ತ ಭಾರತ ಕಟ್ಟುವ ಕಾರ್ಯದಲ್ಲಿ ಸಕಲೇಶಪುರದ ಜನರ ಜೊತೆ ಕೈಜೋಡಿಸಿರುವುದು ತೃಪ್ತಿದಾಯಕವಾಗಿದೆ. ನಶೆ ಅನಾದಿ ಕಾಲದಿಂದಲೂ ಇದ್ದರೂ ಇಂದಿನ ಮಿತಿಮೀರಿದ ಸೇವನೆ ಆಧುನಿಕತೆಗೆ ಮಾರಕವಾಗಿದೆ. ಮೊಬೈಲ್ ಬಳಕೆಯೂ ಒಂದು ಮಾದಕತೆ. ಬದುಕನ್ನು ಸಂಭ್ರಮಿಸಲು ಮಕ್ಕಳ ಹಿತರಕ್ಷಣೆ ಮುಖ್ಯ. ಪೋಷಕರು ಮಕ್ಕಳಿಗೆ ಹೆಚ್ಚು ಸಮಯ ನೀಡಬೇಕು, ಅಧಿಕಾರಿಗಳು ಜಾಗ್ರತೆಯಾಗಬೇಕು, ಚಳವಳಿಗಾರರು ಮುನ್ನಡೆಯಬೇಕು ಎಂದು ಕರೆ ನೀಡಿದರು. ದೇವರನ್ನು ಪೀಠದಿಂದ ಕೆಳಗಿಟ್ಟು ಅಮಲನ್ನು ಪೀಠದ ಮೇಲೆ ಕೂರಿಸಿದ್ದೇವೆ. ದೇವರು ದೇವರಾದರೆ ಡ್ರಗ್ಸ್ ಸೈತಾನ ಎಂದು ಪ್ರಸನ್ನ ಎಚ್ಚರಿಸಿದರು.

ಡಿವೈಎಸ್ಪಿ ಪ್ರಮೋದ್ ಕುಮಾರ್ ಮಾತನಾಡಿ, ಡ್ರಗ್ಸ್ ಸಂಬಂಧಿತ ಮಾಹಿತಿ ತಿಳಿದಿದ್ದರೂ ಮೌನ ವಹಿಸುವುದು ಅಪಾಯಕಾರಿ. ಅದು ಪರೋಕ್ಷವಾಗಿ ವ್ಯಸನಕ್ಕೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಪೊಲೀಸರು ಸಮಾಜದ ಒಳಿತಿಗಾಗಿ ಮುನ್ನಡೆಯುತ್ತಿದ್ದಾರೆ. ಪ್ರತಿಯೊಬ್ಬರೂ ಇಲಾಖೆಯೊಂದಿಗೆ ಸಹಕರಿಸಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪ ಮಾತನಾಡಿ, ಪರಿಚಯದವರ ಮನೆಯಲ್ಲಿಯೇ ಮಗ ನಶೆಗೆ ದಾಸನಾಗಿ ತಂದೆ ತಾಯಿಯನ್ನು ಕಾಡುತ್ತಿರುವುದನ್ನು ಕಂಡಿದ್ದೇವೆ. ಆದ್ದರಿಂದ ಪ್ರತಿ ಶಾಲೆಯಲ್ಲೂ ವ್ಯಸನ ವಿರೋಧಿ ಶಿಕ್ಷಣ ನೀಡಲಾಗುತ್ತಿದೆ. ಮನೆಯಲ್ಲೂ ಪೋಷಕರು ಮಕ್ಕಳ ಜೊತೆಗಿದ್ದು ಜಾಗ್ರತೆ ವಹಿಸಬೇಕು ಎಂದರು.

ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷೆ ಶಾರದ ಗುರುಮೂರ್ತಿ, ಡಾ. ನವೀನ್ ಚಂದ್ರ, ಅಲಿಬಾಬಾ ಮತ್ತಿತರರಿದ್ದರು.

### ಸಿದ್ದರಾಮಯ್ಯ ಸಣ್ಣ ಮನಸ್ಸಿನವರಲ್ಲ: ಪಾಟೀಲ್

ಬೇರೆ ಪಕ್ಷದ ಶಾಸಕರಿಗೆ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಆಗುವುದು ಸಾಮಾನ್ಯ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಣ್ಣ ಮನಸ್ಸಿನವರಲ್ಲ, ಮುಂದಿನ ದಿನಗಳಲ್ಲಿ ಅವರಿಗೂ ಸಹಾಯ ಮಾಡುತ್ತಾರೆ ಎಂದು ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ್ ಹೇಳಿದರು.

ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿ, ಅನುದಾನ ಕೊರತೆಯಿಂದ ಶಾಸಕರು ಕಷ್ಟದಲ್ಲಿರುವುದು ನಿಜ. ಕಾಂಗ್ರೆಸ್ ಶಾಸಕರಿಗೆ 50 ಕೋಟಿ ರೂ. ಹಣ ನೀಡುವುದಾಗಿ ಮುಖ್ಯಮಂತ್ರಿ ಘೋಷಿಸಿದ್ದಾರೆ. ಬಡವರ ಹೊಟ್ಟೆಗೆ ಅನ್ನ ಹಾಕುವುದು ಅಭಿವೃದ್ಧಿ ಕೆಲಸವೇ ಆಗಿದೆ.

ಜನಪರ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿರುವುದರಿಂದ ಹಣಕಾಸಿನ ತೊಂದರೆ ಆಗಿದೆ. ಅದು ಕೂಡ ಅಭಿವೃದ್ಧಿಯ ಭಾಗವೆಂದು ಗ್ಯಾರಂಟಿ ಯೋಜನೆಗಳನ್ನು ಸಮರ್ಥಿಸಿಕೊಂಡರು. ತಮ್ಮದೇ ಪಕ್ಷ ಅಧಿಕಾರದಲ್ಲಿದ್ದರೆ ಶಾಸಕರಿಗೆ ಹೆಚ್ಚಿನ ಅನುದಾನ ದೊರೆಯುತ್ತದೆ. ಬೇರೆ ಪಕ್ಷ ಇದ್ದಾಗ ತಾರತಮ್ಯವಾಗುತ್ತದೆ. ಮುಖ್ಯಮಂತ್ರಿ ಅವರು ಮುಂದಿನ ದಿನಗಳಲ್ಲಿ ಬೇರೆ ಪಕ್ಷದ ಶಾಸಕರಿಗೂ ಸಹಾಯ ಮಾಡುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

## ಮಲೆನಾಡು ಅಭಿವೃದ್ಧಿ ನಿಗಮದಿಂದ 35 ಕೋಟಿ ರೂ. ಕೊಡಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಆರೋಗ್ಯ, ಶಿಕ್ಷಣ, ನೀರಾವರಿಗೆ ಸರ್ಕಾರಗಳು ಆದ್ಯತೆ ನೀಡಿದರೆ ರಾಜ್ಯ ಸುಭೀಕ್ಷವಾಗಿರುತ್ತದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.


ವಿಧಾನಸಭೆ ಅಧಿವೇಶನದಲ್ಲಿ ಗುರುವಾರ ಮಾತನಾಡಿ, ಆಲೂರು-ಕಟ್ಟಾಯ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅತಿಹೆಚ್ಚು ಮಳೆಯಿಂದಾಗಿ ಪ್ರತೀ ಬಾರಿ ಬೆಳೆ ಹಾನಿಯಾಗುತ್ತಲೇ ಇದೆ. ಮೂಲಭೂತ ಸೌಕರ್ಯಗಳಿಗೆ ತೀವ್ರ ಧಕ್ಕೆಯುಂಟಾಗುತ್ತಿದೆ. ರೈತರು ಹಾಕುವ ಗೊಬ್ಬರ ಸಹ ಮಳೆಯಿಂದ ಹರಿದು ಹೋಗುತ್ತದೆ. ಇಲ್ಲಿಂದ ಹರಿಯುವ ನೀರಿನಿಂದ ಬಯಲು ಸೀಮೆ ಭಾಗಕ್ಕೆ ವ್ಯಾಪಕ ಅನುಕೂಲವಾಗುತ್ತಿದ್ದು, ಕ್ಷೇತ್ರದ ಜನತೆಗೆ ಅಪಾರ ನಷ್ಟವಾಗುತ್ತಿದೆ. ಮಳೆಯಿಂದಾಗಿ ಬೆಳೆ ನಷ್ಟ ಮಾತ್ರವಲ್ಲದೆ ಹಲವು ರಸ್ತೆಗಳೂ ಕೊಚ್ಚಿಕೊಂಡು ಹೋಗಿದ್ದು ಅಲ್ಲದೆ ಕೆರೆಗಳಿಗೆ ವ್ಯಾಪಕ ಹಾನಿಯಾಗಿದೆ. ಬಹುತೇಕ ರಸ್ತೆಗಳು ಗುಂಡಿಮಯವಾಗಿದೆ. ಆದರೆ ಮಲೆನಾಡು ಅಭಿವೃದ್ಧಿ ನಿಗಮದಿಂದ ಕೇವಲ 35 ಲಕ್ಷ ರೂ. ಅನುದಾನ ಬರುತ್ತಿದ್ದು ಇದರಿಂದ ಏನು ಮಾಡಲು ಸಾಧ್ಯ? ಕೂಡಲೆ ಸರ್ಕಾರ ಈ ಕುರಿತು ಗಮನಹರಿಸಿ ಕನಿಷ್ಠ 35 ಕೋಟಿ ರೂ. ಪ್ರತಿವರ್ಷ ನೀಡಬೇಕೆಂದು ಒತ್ತಾಯಿಸಿದರು.

## ಹಾಸನದಲ್ಲಿ ವಿಶ್ವ ಛಾಯಾಗ್ರಾಹಕರ ದಿನಾಚರಣೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಗುರುವಾರ ವಿಶ್ವ ಛಾಯಾಗ್ರಾಹಕರ ದಿನಾಚರಣೆ ಆಚರಿಸಲಾಯಿತು.

ಹಿರಿಯ ಛಾಯಾಗ್ರಾಹಕ ಅತೀಖುರ್ ರೆಹಮಾನ್ ಮಾತನಾಡಿ, ಛಾಯಾಗ್ರಾಹಕ ವೃತ್ತಿಯಲ್ಲಿ ಹಲವು ಏಳು ಬೀಳು, ಅನೇಕ ಕಷ್ಟ ಅನುಭವಿಸಿದ್ದೇವೆ. ನೆಗೆಟಿವ್ ರೋಲ್, ಟೇಪ್ ನಿಂದ ಈಗಿನ ಚಿಪ್ ವರೆಗೂ ಏನೆಲ್ಲ ಸಮಸ್ಯೆ ಇದ್ದವು ಎಂಬುದನ್ನು ವಿವರಿಸಿದರು. ಫೋಟೋಗ್ರಫಿ ಡಿಜಿಟಲ್ ಮಾಧ್ಯಮ ಬಂದರೂ ಆಗಿನಿಂದ ಈವರೆಗೂ ಒಳ್ಳೆಯ ಸಂಬಳ ಇಲ್ಲ ಎಂದು ಬೇಸರ ಹೊರ ಹಾಕಿದರು. ಮತ್ತೊಬ್ಬ ಫೋಟೋ ಗ್ರಾಫರ್ ಹಿಂದೂ ಪ್ರಕಾಶ್ ಮಾತನಾಡಿ, ಹಿಂದೆ ನಮ್ಮನ್ನು ಯಾರೂ ಗುರುತಿಸುತ್ತಿರಲಿಲ್ಲ, ಬ್ಲಾಕ್ ಅಂಡ್ ವೈಟ್ ಕಾಲಘಟ್ಟದಿಂದಲೂ ಕೆಲಸ ಮಾಡಿರುವ ನಮ್ಮನ್ನು ಯಾವುದೇ ಸಂಸ್ಥೆ ಗೌರವಯುತವಾಗಿ ನಡೆಸಿಕೊಂಡಿಲ್ಲ,



ಅಪಾಯ ಸನ್ನಿವೇಶದ ನಡುವೆಯೂ ಕೆಲಸ ಮಾಡಿದ್ದೇವೆ. ಈಗಿನವರು ಇದೊಂದೇ ವೃತ್ತಿ ನೆಚ್ಚಿಕೊಳ್ಳಬೇಡಿ. ಪರ್ಯಾಯ ವೃತ್ತಿಯನ್ನೂ ಮಾಡಿ ಎಂದರು.

ಛಾಯಾಗ್ರಾಹಕರಾದ ಜ್ಞಾನೇಶ್ವರ್, ಅಮೋಘ್ ವಾಹಿನಿ ಮುಖ್ಯಸ್ಥ ಕೆಪಿಎಸ್ ಪ್ರಮೋದ್, ರಾಷ್ಟ್ರೀಯ ಮಂಡಳಿ ಸದಸ್ಯ ಜಿ.ಪ್ರಕಾಶ್, ಹೆತ್ತೂರು ನಾಗರಾಜ್, ಮಾಜಿ ಅಧ್ಯಕ್ಷ ಬಿ.ಆರ್. ಉದಯಕುಮಾರ್, ಕೆ.ಎಂ.ಹರೀಶ್, ಎಸ್.ಡಿ.ರಂಗಸ್ವಾಮಿ,

ಪ್ರಕಾಶ್ ಬೆಳವಾಡಿ, ಹೆಚ್. ಆರ್. ಶರತ್, ಮಾಜಿ ಅಧ್ಯಕ್ಷರಾದ ಬಾಳ್ಳುಗೋಪಾಲ್, ಲೀಲಾವತಿ ಮೊದಲಾದವರು ಫೋಟೋಗ್ರಾಫರ್ ಮಹತ್ವ, ವಿಡಿಯೋ ಜರ್ನಲಿಸ್ಟ್‌ಗಳ ಸಂಕಷ್ಟ, ಸವಾಲು ಜೊತೆಗೆ ತಾವು ಅನುಭವಿಸಿರುವ ಸಂದರ್ಭ, ಸನ್ನಿವೇಶಗಳನ್ನು ವಿವರಿಸಿದರು.

ಮಾಜಿ ಅಧ್ಯಕ್ಷರಾದ ಕೆ.ಆರ್. ಮಂಜುನಾಥ್ ಮಾತನಾಡಿ, ಛಾಯಾಗ್ರಾಹಕ ಹಿಂದೆ ಮತ್ತು ಇಂದು ಏನೆಲ್ಲ ಸವಾಲು ಎದುರಿಸುತ್ತಿದ್ದಾನೆ. ಬದಲಾವಣೆ ಆಗಿದೆ ಎಂಬುದನ್ನು ತುಲನಾತ್ಮಕವಾಗಿ ವಿವರಿಸಿದರು.

ಸಂಘದ ಅಧ್ಯಕ್ಷ ಕೆ.ಹೆಚ್. ವೇಣುಕುಮಾರ್ ಮಾತನಾಡಿ, ನೂರು ಪದಗಳನ್ನು ಒಂದು ಚಿತ್ರ ಹೇಳಲಿದೆ. ಅಕ್ಷರ ತಿಳಿಯದವನಿಗೂ ಒಂದು ಚಿತ್ರ, ಒಂದು ದೃಶ್ಯ ಎಲ್ಲವನ್ನೂ ತಿಳಿಸಲಿದೆ. ಆದರೆ ಆ ವೃತ್ತಿಯಲ್ಲಿ ತೊಡಗಿರುವವರಿಗೆ ಭದ್ರತೆ ಇಲ್ಲ ಅನ್ನೋದು ವಿಷಾದನೀಯ ಎಂದರು.

ಕಡೆಯಲ್ಲಿ ವಿವಿಧ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಕೆಲಸ ಮಾಡುತ್ತಿರುವ ಕ್ಯಾಮರಾಮನ್‌ಗಳಾದ ಹೆಚ್.ಆರ್. ಶರತ್, ಮಹೇಶ್, ನಾಗರಾಜ್, ಪ್ರವೀಣ್, ಕಿಶೋರ್, ಸುಧೀರ್ ಜೈನ್, ಚಂದನ್, ನವೀನ್ ಮತ್ತು ಮಧು ಅವರನ್ನು ಸನ್ಮಾನಿಸಲಾಯಿತು.

ಉಪಾಧ್ಯಕ್ಷ ಮೋಹನ್ ಕುಮಾರ್ ನಿರೂಪಿಸಿದರು. ಮತ್ತೊಬ್ಬ ಉಪಾಧ್ಯಕ್ಷ ಕೆ.ಎಂ.ಹರೀಶ್ ಸ್ವಾಗತಿಸಿದರು.

## ಧರ್ಮಸ್ಥಳ ಕುರಿತು ಅಪಪ್ರಚಾರ ಖಂಡಿಸಿ ಬಿಜೆಪಿ ಪ್ರತಿಭಟನೆ



ಸಕಲೇಶಪುರ: ಧರ್ಮಸ್ಥಳ ಕ್ಷೇತ್ರದ ವಿರುದ್ಧ ನಡೆಯುತ್ತಿರುವ ಅಪಪ್ರಚಾರ ಖಂಡಿಸಿ ಬಿಜೆಪಿ ಕಾರ್ಯಕರ್ತರು ಗುರುವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಬೆಂಗಳೂರಿನ ಬ್ಯಾಟರಾಯನಪುರ ಕ್ಷೇತ್ರದ ಬಿಜೆಪಿ ಮುಖಂಡ ತಮ್ಮೇಶ್ ಗೌಡ ನೇತೃತ್ವದಲ್ಲಿ ನೂರಾರು ಕಾರ್ಯಕರ್ತರು ಮೆರವಣಿಗೆಯಲ್ಲಿ ಸಕಲೇಶಪುರ ತಾಲ್ಲೂಕಿಗೆ ಆಗಮಿಸಿ ಧರ್ಮಸ್ಥಳದತ್ತ ಪ್ರಯಾಣ ಬೆಳೆಸಿದರು. ಬಾಳ್ಳುಪೇಟೆ ಸಕಲೇಶಪುರ ಬೈಪಾಸ್ ಸೇರಿ ಹಲವು ಕಡೆ ಜಿಲ್ಲಾ ಬಿಜೆಪಿ ಮುಖಂಡರು ಕಾರ್ಯಕರ್ತರಿಗೆ ಸ್ವಾಗತಿಸಿದರು.

ತಮ್ಮೇಶ್ ಗೌಡ ಅವರು ಮಾತನಾಡಿ, ಕಾಂಗ್ರೆಸ್ ಸರ್ಕಾರ ಧರ್ಮಸ್ಥಳದ ವಿಷಯದಲ್ಲಿ ಕೈಗೊಂಡಿರುವ ನಿಲುವು ಖಂಡನೀಯ. ದೇವಸ್ಥಾನದ ಬಗ್ಗೆ ಸಾಮಾಜಿಕ ಜಾಲತಾಣ ಹಾಗೂ ಕೆಲವು ಯೂಟ್ಯೂಬ್ ಚಾನಲ್‌ಗಳಲ್ಲಿ ಅವಹೇಳನಕಾರಿ ವಿಷಯ ಪ್ರಸಾರ ಮಾಡುತ್ತಿದ್ದರೂ ಸರ್ಕಾರ ಕ್ರಮ ಕೈಗೊಂಡಿಲ್ಲ. ಹಿಂದೂ ಧರ್ಮದ ವಿರುದ್ಧ ವ್ಯವಸ್ಥಿತ ಪಿತೂರಿ ನಡೆಯುತ್ತಿದೆ. ಯಾರೇ ತಪ್ಪಿತಸ್ಥರಾಗಿರಲಿ ಅವರ ವಿರುದ್ಧ ಕಾನೂನು ಕ್ರಮವಾಗಬೇಕು. ಆದರೆ ಶ್ರೀಕ್ಷೇತ್ರದ ವಿರುದ್ಧ ಅಪಪ್ರಚಾರ ಸರಿಯಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

# ಗಣೇಶ ಮೂರ್ತಿ ತಯಾರಿಯಲ್ಲಿ ಕಲಾವಿದರು ಮಗ್ನ

## ಮಣ್ಣಿನ ಮೂರ್ತಿಗಳಿಗೆ ಹೆಚ್ಚಿದ ಬೇಡಿಕೆ | ತುಮಕೂರು ಜಿಲ್ಲೆಯಿಂದ ಜೇಡಿ ಮಣ್ಣು

ಚನ್ನರಾಯಪಟ್ಟಣ: ಹಿಂದು ಆಚರಣೆಗಳಲ್ಲಿ ಒಂದಾದ ಗಣೇಶ ಚತುರ್ಥಿಗೆ ದಿನಗಣನೆ ಶುರುವಾಗಿದ್ದು ವಿಶಿಷ್ಟ ಶೈಲಿಯ ಹಾಗೂ ವಿವಿಧ ಮಾದರಿಯ ಗೌರಿ-ಗಣೇಶ ಮೂರ್ತಿಗಳ ತಯಾರಿಕೆಯಲ್ಲಿ ಕಲಾವಿದರು ಮಗ್ನರಾಗಿದ್ದಾರೆ.

ಪಿಒಪಿ ಹಾಗೂ ಇತರೆ ಕೆಮಿಕಲ್ ಬಳಕೆಯಿಂದ ಮೂರ್ತಿಗಳನ್ನು ತಯಾರು ಮಾಡುವುದು ಮತ್ತು ಬಳಕೆ ಮಾಡುವುದನ್ನು ಸರ್ಕಾರ ನಿಷೇಧಿಸಿದ್ದು ಪರಿಸರ ಸ್ನೇಹಿ ಮೂರ್ತಿಗಳನ್ನು ಪೂಜಿಸುವಂತೆ ಆದೇಶಿಸಿರುವುದರಿಂದ ಮಣ್ಣಿನಿಂದ ಮಾಡಿರುವ ಗೌರಿ-ಗಣೇಶ ಮೂರ್ತಿಗಳಿಗೆ ಸಾಕಷ್ಟು ಬೇಡಿಕೆ ಇದೆ.

ಈಗಾಗಲೇ ತಾಲ್ಲೂಕು ಕೇಂದ್ರ ಸೇರಿ ವ್ಯಾಪ್ತಿಯ ಹೋಬಳಿ ಕೇಂದ್ರಗಳಲ್ಲಿ ಶಿಲ್ಪಿಗಳು ವಿಭಿನ್ನ ಗಣೇಶ ಮೂರ್ತಿಗಳ ತಯಾರಿಕೆಯಲ್ಲಿ ತಲ್ಲೀನರಾಗಿದ್ದಾರೆ. ಅದರಂತೆಯೇ ತಾಲ್ಲೂಕಿನ ಹಿರೀಸಾವೆ ಗ್ರಾಮದ ಎಸ್.ಆರ್. ಮೋಹನ್ ಅವರು ಕಳೆದ 3 ತಿಂಗಳಿಂದ ವಿಶೇಷ ಹಾಗೂ ವಿಶಿಷ್ಟ ಶೈಲಿಯ ಗೌರಿ ಹಾಗೂ ಗಣೇಶ ಮೂರ್ತಿಗಳ ತಯಾರಿಕೆಯಲ್ಲಿ ನಿರತರಾಗಿದ್ದಾರೆ.

ಸುಮಾರು 30 ವರ್ಷಗಳಿಂದ ಗಣೇಶ ಮೂರ್ತಿ ತಯಾರಿಕೆಯನ್ನೇ ಕಾಯಕ ಮಾಡಿಕೊಂಡಿರುವ ಶಿಲ್ಪಿ ಎಸ್.ಆರ್.ಮೋಹನ್ ಅವರು ತಯಾರಿಸಿರುವ ಗೌರಿ-ಗಣೇಶ ಮೂರ್ತಿಗಳು ಮಂಡ್ಯ, ನಾಗಮಂಗಲ, ತುಮಕೂರು, ತುರುವೇಕೆರೆ, ಹೊಳೆನರಸೀಪುರ ಹಾಗೂ ಅರಸೀಕೆರೆ ಸೇರಿ ಹೊರ ರಾಜ್ಯ ಆಂಧ್ರ ಪ್ರದೇಶಕ್ಕೂ ಕೊಂಡೊಯ್ದಿರುವುದು ವಿಶೇಷವಾಗಿದೆ.

ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ಕೆರೆಯಿಂದ 35 ಸಾವಿರ ರೂ. ಮೌಲ್ಯದ ಒಂದು ಟಿಪ್ಪರ್ ಲೋಡ್ ಜೇಡಿ ಮಣ್ಣು ತರಿಸಿದ್ದು ತನ್ನ ಕುಟುಂಬದ ಸದಸ್ಯರ ಸಹಕಾರದೊಂದಿಗೆ ಗೌರಿ-ಗಣೇಶ ಮೂರ್ತಿಗಳ ತಯಾರಿಕೆ ನಡೆಯುತ್ತಿದೆ. ಈಗಾಗಲೇ ಸುಮಾರು 25 ಮೂರ್ತಿಗಳು ಮಾರಾಟವಾಗಿದ್ದು 35ಕ್ಕೂ ಹೆಚ್ಚು ಮೂರ್ತಿಗಳಿಗೆ ಸಾರ್ವಜನಿಕರು ಮುಂಗಡ ಹಣ ಪಾವತಿಸಿದ್ದಾರೆ ಎಂದು ಕಲಾವಿದ ಮೋಹನ್ ತಿಳಿಸಿದರು.



> ಹತ್ತಿರದ ಕೆರೆಗಳಲ್ಲಿ ಉತ್ತಮ ಜೇಡಿ ಮಣ್ಣು ಸಿಗದ ಕಾರಣ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ಕೆರೆಯಿಂದ ಮಣ್ಣು ತರಿಸಲಾಗಿದ್ದು ಕಳೆದ 3 ತಿಂಗಳಿಂದ ಮೂರ್ತಿಗಳ ತಯಾರಿಕೆಯಲ್ಲಿ ತೊಡಗಲಾಗಿದೆ. 250 ರಿಂದ 30 ಸಾವಿರ ರೂ. ವರೆಗಿನ ಬೆಲೆಯ ಮೂರ್ತಿಗಳು ಲಭ್ಯವಿದೆ. ಸರ್ಕಾರದ ಆದೇಶದಂತೆ ಪರಿಸರ ಸ್ನೇಹಿ ಮೂರ್ತಿಗಳ ತಯಾರಿಕೆ ಹಾಗೂ ಪ್ರತಿಷ್ಠಾಪನೆಗೆ ಅಗತ್ಯ ಆದ್ಯತೆ ನೀಡಿದರೆ ಪರಿಸರವನ್ನು ಕಾಪಾಡಿಕೊಳ್ಳಬಹುದು.
>
> 
>
> **– ಎಸ್.ಆರ್. ಮೋಹನ್, ಶಿಲ್ಪಿ ಹಿರೀಸಾವೆ**

ಒಂದು ಅಡಿಯಿಂದ ಗ್ರಾಹಕರ ಬೇಡಿಕೆಯಂತೆ ಸುಮಾರು 12 ಅಡಿ ಎತ್ತರದ ಮೂರ್ತಿಗಳು ಇವರ ಕೈಚಳಕದಲ್ಲಿ ಮೂಡಿ ಬರಲಿವೆ. 250 ರೂ. ನಿಂದ 30 ಸಾವಿರ ರೂ. ವರೆಗೆ ಮೂರ್ತಿಗಳು ದೊರೆಯಲಿವೆ.

ಪ್ರತಿವರ್ಷ 150 ರಿಂದ 200ಕ್ಕೂ ಹೆಚ್ಚು ಮೂರ್ತಿಗಳನ್ನು ತಯಾರಿಸಿ ಮಾರಾಟ ಮಾಡಲಿದ್ದಾರೆ. ವಿಭಿನ್ನ ಶೈಲಿಯ ಮೂರ್ತಿಗಳು ಲಭ್ಯವಿರುವುದರಿಂದ ವರ್ಷದಿಂದ ವರ್ಷಕ್ಕೆ ನಾವು ತಯಾರಿಸುವ ಮೂರ್ತಿಗಳಿಗೆ ಭೇಡಿಕೆ ಹೆಚ್ಚುತ್ತಿದೆ ಎಂದು ಶಿಲ್ಪಿ ಎಸ್.ಆರ್.ಮೋಹನ್ ಮಾಹಿತಿ ನೀಡಿದರು.



ಮೂರ್ತಿಗಳ ತಯಾರಿಕೆಗೆ ಹದವಾದ ಜೆಡಿಮಣ್ಣು ಮೊದಲೆಲ್ಲ ತಾಲ್ಲೂಕು ವ್ಯಾಪ್ತಿಯ ಕೆಲವೇ ಕೆಲ ಕೆರೆಗಳಲ್ಲಿ ಸಿಗುತಿತ್ತು. ಆದರೆ ಏತನೀರಾವರಿ ಯೋಜನೆಯಡಿ ಕೆರೆಗಳಿಗೆ ನೀರು ತುಂಬಿಸುವ ವಿಚಾರ ತಿಳಿದು ರೈತರು ಜೆಸಿಬಿ ಯಂತ್ರ ಬಳಕೆ ಮಾಡಿಕೊಂಡು ಟ್ರ್ಯಾಕ್ಟರ್‌ಗಳ ಮೂಲಕ ಕೆರೆಗಳ ಮೇಲ್ಮಣ್ಣನ್ನು ಸಂಪೂರ್ಣವಾಗಿ ಹೂಳು ತೆಗೆದು ಕೃಷಿ ಜಮೀನುಗಳಿಗೆ ಸಾಗಿಸಲಾಗಿದೆ.

ಜತೆಗೆ 3-4 ವರ್ಷಗಳಿಂದ ವ್ಯಾಪ್ತಿಯ ಬಹುತೇಕ ಕೆರೆಗಳಿಗೆ ನೀರು ತುಂಬಿಸಲಾಗಿದ್ದು ಅಲ್ಲದೆ ಕಳೆದ ವರ್ಷ ಹೆಚ್ಚು ಮಳೆ ಸುರಿದಿದ್ದರಿಂದ ತುಂಬಿದ ಕೆರೆಗಳಲ್ಲಿ ನೀರಿನ ಪ್ರಮಾಣ ಇನ್ನೂ ಕಡಿಮೆಯಾಗಿಲ್ಲ. ಆದ್ದರಿಂದ ಸದ್ಯಕ್ಕೆ ಸ್ಥಳೀಯವಾಗಿ ಉತ್ತಮ ಮಣ್ಣು ಲಭ್ಯವಾಗದ ಕಾರಣ ಹೊರ ಜಿಲ್ಲೆಗಳಿಂದ ತರಿಸುವುದು ಸ್ವಲ್ಪ ದುಬಾರಿ ಎನ್ನಲಾಗಿದೆ.

ಈಗಾಗಲೇ ಸಿದ್ಧಗೊಂಡಿರುವ ಗೌರಿ-ಗಣೇಶ ಮೂರ್ತಿಗಳು ಮಾರುಕಟ್ಟೆಗೆ ಆಗಮಿಸುತ್ತಿದ್ದು ಪಟ್ಟಣದ ಜತೆಗೆ ಹಿರೀಸಾವೆ, ನುಗ್ಗೇಹಳ್ಳಿ, ಶ್ರವಣಬೆಳಗೊಳ, ಮಟ್ಟನವಿಲೆ, ಗೌಡಗೆರೆ, ಜುಟ್ಟನಹಳ್ಳಿ, ದಿಡಗ, ಕಿರೀಸಾವೆ ಗಡಿ ಸೇರಿದಂತೆ ಬಹುತೇಕ ಕಡೆ ಮೂರ್ತಿಗಳು ಲಭ್ಯವಾಗಲಿವೆ.

ಪಿಒಪಿ ಮೂರ್ತಿಗಳ ಮಾರಾಟ: ನಾಗಮಂಗಲ, ಬೆಳ್ಳೂರು ಕ್ರಾಸ್ ಸೇರಿದಂತೆ ವಿವಿಧೆಡೆಗೆ ಪಿಒಪಿಯಿಂದ ತಯಾರಾಗಿರುವ ಮೂರ್ತಿಗಳು ಲಗ್ಗೆ ಇಟ್ಟಿವೆ. ಪಿಒಪಿ ಹಾಗೂ ಹಾನಿಕಾರಕ ಬಣ್ಣ ಹಾಗೂ ವಸ್ತುಗಳಿಂದ ತಯಾರಾಗುವ ಮೂರ್ತಿಗಳನ್ನು ಹಬ್ಬದ ನಂತರ ಕೆರೆ ಕಟ್ಟೆಗಳಿಗೆ ವಿಸರ್ಜಿಸಲಿದ್ದು ಇದರ ಪರಿಣಾಮ ಜಲಚರಗಳು ಹಾಗೂ ನೀರನ್ನು ಉಪಯೋಗಿಸುವ ಜನ-ಜಾನುವಾರುಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗಲಿದೆ. ಸರ್ಕಾರ ಪಿಒಪಿ ಹಾಗೂ ಹಾನಿಕಾರಕ ಬಣ್ಣ ಹಾಗೂ ಇತರೆ ವಸ್ತುಗಳಿಂದ ಮೂರ್ತಿಗಳನ್ನು ತಯಾರಿಸದಂತೆ ನಿಷೇಧಿಸಿದ್ದರೂ ಈ ಧಂದೆ ನಿಂತಿಲ್ಲ. ಈಗಾಗಲೇ ಪಿಒಪಿ ಯಿಂದ ತಯಾರಿಸಿರುವ ಮೂರ್ತಿಗಳು ಮಾರುಕಟ್ಟೆಗಳಿಗೆ ಲಗ್ಗೆ ಇಟ್ಟಿದ್ದು ಸಂಬಂದಪಟ್ಟ ಇಲಾಖೆ ಅಧಿಕಾರಿಗಳು ಕಡಿವಾಣ ಹಾಕುವಲ್ಲಿ ಮುಂದಾಗಬೇಕು ಎಂಬುದು ಕಲಾವಿದರ ಹಾಗೂ ಸಾರ್ವಜನಿಕರ ಮನವಿಯಾಗಿದೆ.

# ಲೋಪ ಎಸಗುವ ಗುತ್ತಿಗೆದಾರರ ಕಪ್ಪು ಪಟ್ಟಿಗೆ ಸೇರಿಸಿ: ಆಗ್ರಹ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಆಲೂರು: ನಗರೋತ್ಥಾನ ಯೋಜನೆಯಲ್ಲಿ ನನೆಗುದಿಗೆ ಬಿದ್ದಿರುವ ಕಾಮಗಾರಿಗಳನ್ನು ಕೂಡಲೇ ಪೂರ್ಣಗೊಳಿಸದಿದ್ದರೆ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸುವಂತೆ ಅಧ್ಯಕ್ಷರು, ಸದಸ್ಯರು ಸಾಮಾನ್ಯ ಸಭೆಯಲ್ಲಿ ಅಗ್ರಹಿಸಿದರು.

ಪಟ್ಟಣ ಪಂಚಾಯಿತಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಾಮಾನ್ಯ ಸಭೆಯಲ್ಲಿ ಅಧ್ಯಕ್ಷೆ ತಾಹೇರ ಬೇಗಂ ಮಾತನಾಡಿ, ಮುಖ್ಯಮಂತ್ರಿ ಅಮೃತ್ ನಗರೋತ್ಥಾನ ಯೋಜನೆಯಡಿ 2.08 ಕೋಟಿ ರೂ. ಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿ ಮಾಡಲು ಗುತ್ತಿಗೆದಾರರಿಗೆ ಟೆಂಡರ್ ನೀಡಲಾಗಿತ್ತು. ಕಾಮಗಾರಿ ಪೂರ್ಣಗೊಳಿಸದಿರುವುದರಿಂದ 2025ರ ಜ. 6 ರಂದು ಜಿಲ್ಲಾ ನಗರಾಭಿವೃದ್ಧಿಕೋಶ ಇಲಾಖೆಗೆ ಪತ್ರ ಬರೆದು ಕೆಲಸ ಪೂರ್ಣಗೊಳಿಸುವಂತೆ ಮನವಿ ಮಾಡಲಾಗಿದೆ. ನಗರಾಭಿವೃದ್ಧಿಕೋಶ ಇಲಾಖೆ ಗುತ್ತಿಗೆದಾರರಿಗೆ ನೋಟಿಸ್ ನೀಡಿದ್ದಾರೆ ಎಂದು ಮಾಹಿತಿ ನೀಡಿದರು.

ಪಟ್ಟಣ ಪಂಚಾಯಿತಿ 11 ವಾರ್ಡ್‌ಗಳ ರಸ್ತೆ ಇಕ್ಕೆಲಗಳಲ್ಲಿ ಬೆಳೆದಿರುವ ಗಿಡಗಂಟಿ ತೆರವುಗೊಳಿಸಿ, ಚರಂಡಿ ಶುಚಿಗೊಳಿಸಲು ಕೂಡಲೆ ಕ್ರಮ ಕೈಗೊಳ್ಳಬೇಕು. ಎಲ್ಲಾ ವಾರ್ಡ್‌ಗಳ ರಸ್ತೆ ಇಕ್ಕೆಲಗಳಲ್ಲಿ ಕೆಲ ನಿವಾಸಿಗಳು ತಮ್ಮ ಮನೆ ಮುಂದೆ ಗಿಡಗಳನ್ನು ಬೆಳೆಸಿ ಸಂಚಾರಕ್ಕೆ ತೊಡಕುಂಟು ಮಾಡಿದ್ದಾರೆ. ತೆರವುಗೊಳಿಸುವ ಮುನ್ನ ಪ್ರಚಾರಪಡಿಸಿ ತೆರವುಗೊಳಿಸಬೇಕು ಎಂದು ಎಲ್ಲ ಸದಸ್ಯರು ಆಗ್ರಹಿಸಿದರು.

ಅಧ್ಯಕ್ಷೆ ತಾಹೇರ ಬೇಗಂ ಮತ್ತು ಮುಖ್ಯಾಧಿಕಾರಿ ಮಂಜುನಾಥ್ ಉತ್ತರಿಸಿ, ಜೆಸಿಬಿ ಬಳಸಿ ತೆರವುಗೊಳಿಸಲು ಕೂಡಲೆ ಟೆಂಡರ್ ಕರೆದು ಕ್ರಮ ಕೈಗೊಳ್ಳಲಾಗುವುದು ಎಂದರು.

ಪ. ಜಾತಿಗೆ ಸೇರಿದ ಒಂದು ಮತ್ತು 8ನೇ ವಾರ್ಡ್‌ಗೆ 15ನೇ ಹಣಕಾಸು ಯೋಜನೆಯಲ್ಲಿ ಅನುದಾನ ನೀಡಬೇಕು ಎಂದು ಆಗ್ರಹಿಸಿ ಸದಸ್ಯರಾದ ಧರ್ಮ, ಎ.ಡಿ. ಸಂತೋಷ್ ಸಭೆ ಬಹಿಷ್ಕರಿಸಿ ಹೊರ ನಡೆದರು. ಕೆಲ ಸಮಯದ ನಂತರ ಧರ್ಮ ರವರು ಪುನ: ಸಭೆಗೆ ಹಾಜರಾದರು. ಮುಖ್ಯಾಧಿಕಾರಿ ಪ್ರತಿಕ್ರಿಯಿಸಿ, ಒಂದನೇ ವಾರ್ಡಿಗೆ ನಗರೋತ್ಥಾನದಲ್ಲಿ 33 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಕಾಮಗಾರಿ ಮತ್ತು ಎಸ್.ಎಫ್.ಸಿ. ಅನುದಾನದಲ್ಲಿ 2.40 ಲಕ್ಷ ರೂ. ವೆಚ್ಚದಲ್ಲಿ ಚರಂಡಿ ಕಾಮಗಾರಿ ಆಗಿದೆ ಎಂದು ಮಾಹಿತಿ ನೀಡಿದರು.

ಬೀದಿನಾಯಿಗಳ ನಿಯಂತ್ರಣಕ್ಕಾಗಿ ಸಂತಾನಹರಣ ಶಸ್ತ್ರಚಿಕಿತ್ಸೆ ಗೆ ಟೆಂಡರ್ ಕರೆಯಲಾಗಿದೆ. ಎಸ್.ಎಫ್.ಸಿ. ಅನುದಾನದಲ್ಲಿ 13 ಬಡ ವಿದ್ಯಾರ್ಥಿಳಿಗೆ 31 ಸಾವಿರ ರೂ. ವಿದ್ಯಾರ್ಥಿವೇತನ ಮತ್ತು ಪೌರ ಕಾರ್ಮಿಕರ 2 ಮಕ್ಕಳಿಗೆ ಲ್ಯಾಪ್‌ಟಾಪ್ ನೀಡಲಾಗಿದೆ ಎಂದು ಸಭೆಗೆ ಮಾಹಿತಿ ನೀಡಲಾಯಿತು.

ಮುಖ್ಯರಸ್ತೆ ಮದ್ಯೆ ಡಿವೈಡರ್ ಗೆ ಅಲಂಕಾರಿಕ ದೀಪ ಅಳವಡಿಸಲು ಟೆಂಡರ್ ಕರೆಯಲಾಗಿದೆ. ಸರ್ಕಾರದಿಂದ ಬರುವ ಅನುದಾನದಲ್ಲಿ ಎಲ್ಲ ವಾರ್ಡುಗಳಿಗೆ ಆದ್ಯತೆ ಮೇಲೆ ಹಂಚುವ ಮೂಲಕ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಮುಖ್ಯಾಧಿಕಾರಿ ಸಭೆಗೆ ತಿಳಿಸಿದರು.

ಸಭೆಯಲ್ಲಿ ಸದಸ್ಯರಾದ ತೌಫಿಕ್, ಹರೀಶ್, ಅಬ್ದುಲ್‌ಖುದ್ದೂಸ್, ಸಂದೇಶ್, ಖಾಲಿದ್‌ಪಾಷ, ಎ.ಡಿ. ಸಂತೋಷ್, ಧರ್ಮ, ಶೀಲಾ, ಇಂಜಿನಿಯರ್ ಸುಜಾತ, ಸಿಬ್ಬಂದಿಗಳಾದ ರಾಜಲಕ್ಷ್ಮಿ, ಲಲಿತಮ್ಮ, ಉಷಾರಾಣಿ ಭಾಗವಹಿಸಿದ್ದರು.

# ತಂಬಾಕು ಉತ್ಪನ್ನ ಮಾರಾಟ: 2890 ರೂ. ದಂಡ




ಅರಕಲಗೂಡು: ಜಿಲ್ಲಾ ತಂಬಾಕು ಕೋಶ ಮತ್ತು ತಾಲೂಕು ತಂಬಾಕು ಕೋಶ ವತಿಯಿಂದ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಪುಷ್ಪಲತಾ ಅವರ ನೇತೃತ್ವದಲ್ಲಿ ಶಾಲಾ ಕಾಲೇಜು ಬಳಿ ಇರುವ ಅಂಗಡಿಗಳ ಮೇಲೆ ದಾಳಿ ಮಾಡಿ 2890 ರೂ. ದಂಡ ವಿಧಿಸಿದಲ್ಲದೆ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುತ್ತಿರುವ ಪರಿಣಾಮ ಯುವ ಸಮುದಾಯದ ಮೇಲೆ ದುಷ್ಪರಿಣಾಮ ಬೀರುತ್ತಿರುವ ಬಗ್ಗೆ ತಿಳಿವಳಿಕೆ ನೀಡಲಾಯಿತು.

ಪಟ್ಟಣದ ಬಾಲಕರ ಪದವಿ ಪೂರ್ವ ಕಾಲೇಜು ರಸ್ತೆ, ಕೋರ್ಟ್ ಮುಂಭಾಗ, ಹಾಸನ ರಸ್ತೆ ಸರ್ಕಾರಿ ಐಟಿಐ ಮುಂಭಾಗದ ಅಂಗಡಿಗಳ ಮೇಲೆ ತಂಡ ದಿಡೀರ್ ದಾಳಿ ಮಾಡಿ ಜಾಗೃತಿ ಮೂಡಿಸಿತು.

ಡಾ. ಪುಷ್ಪಲತಾ ಮಾತನಾಡಿ, ಸೆಕ್ಷನ್ 4ರ ಅಡಿಯಲ್ಲಿ ತಂಬಾಕು ಉತ್ಪನ್ನ ಮಾರಾಟ ಮಾಡುವ ಅಂಗಡಿಗಳ ಮೇಲೆ ದಂಡ ವಿಧಿಸಬಹುದಾಗಿದೆ. ಕೇವಲ ದಂಡ ವಿಧಿಸುವುದರಿಂದ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ. ಶಾಲಾ ಕಾಲೇಜು ಬಳಿ ಇರುವ ಅಂಗಡಿಗಳಲ್ಲಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡಬಾರದು. ಇದರಿಂದ ಅಪ್ರಾಪ್ತ ಬಾಲಕರು ಈ ದುಸ್ಕೃತ್ಯಕ್ಕೆ ಒಳಗಾಗುವ ಸಾಧ್ಯತೆ ಇರುತ್ತದೆ. ಇದರ ನಿಯಂತ್ರಣಕ್ಕೆ ಪ್ರಮುಖವಾಗಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವುದರಿಂದ ಸಾಧ್ಯವಾಗುತ್ತದೆ. ಪ್ರತಿ ಮನೆಗಳಲ್ಲಿ ಬಾಲಕರು ಇದ್ದು, ಇವರ ಬಗ್ಗೆ ಎಚ್ಚರಿಕೆಯನ್ನು ವಹಿಸಬೇಕೆಂದು ತಿಳಿವಳಿಕೆ ನೀಡಿದರಲ್ಲದೆ ಮುಂದಿನ ದಿನಗಳಲ್ಲಿ ಅಂಗಡಿಗಳ ಮೇಲೆ ದಾಳಿಯನ್ನು ಮುಂದುವರಿಸಲಾಗುವುದು ಎಂದು ಹೇಳಿದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಮಂಜುಳಾ, ಜಿಲ್ಲಾ ತಂಬಾಕು ಕೋಶದ ಸಂಯೋಜಕಿ ಮಮತಾ, ಆರೋಗ್ಯ ಇಲಾಖೆ ಅಧಿಕಾರಿ ಪರಮೇಶ್, ಪೊಲೀಸ್ ಕುಮಾರ್ ದಾಳಿಯಲ್ಲಿ ಭಾಗವಹಿಸಿದ್ದರು.

# ಗ್ರಾಮಕ್ಕೆ ನುಗ್ಗಿ ದಾಂಧಲೆ ಮಾಡಿದ ಮಾಡಿದ ಕಾಡಾನೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಅರೇಹಳ್ಳಿ: ಕ್ಯಾಪ್ಟನ್ ಹೆಸರಿನ ಒಂಟಿ ಸಲಗ ಕಾಡಾನೆ ತಾಲ್ಲೂಕಿನ ಅರೇಹಳ್ಳಿ ಗ್ರಾಮದೊಳಗೆ ನುಗ್ಗಿ ದಾಂಧಲೆ ನಡೆಸಿ ಕಾರು ಜಖಂಗೊಳಿಸಿ ಜನರನ್ನು ಅಟ್ಟಾಡಿಸಿರುವ ಘಟನೆ ನಡೆದಿದೆ.

ಏಕಾಏಕಿ ಪಟ್ಟಣದ ಮುಖ್ಯರಸ್ತೆಯ ಮೂಲಕ ಜನವಸತಿ ಪ್ರದೇಶಕ್ಕೆ ನುಗ್ಗಿದ ಕಾಡಾನೆ ಕ್ಯಾಪ್ಟನ್, ಗ್ರಾಮದೊಳಗೆ ಓಡಾಡಿ ಗ್ರಾಮಸ್ಥರಲ್ಲಿ ಜೀವನ ಭಯ ಹುಟ್ಟಿಸಿದ್ದು ಮಾತ್ರವಲ್ಲದೇ ಮನೆಗಳ ಮುಂದೆ ಬಂದು ನಿಂತಿದ್ದರಿಂದ ಜನರು ಬಾಗಿಲು ಮುಚ್ಚಿಕೊಂಡು ಒಳ ಸೇರಿಕೊಳ್ಳುವಂತಾಗಿತ್ತು.

ನಾಯಿಗಳು ಬೊಗಳುವ ಸದ್ದು, ಜನರ ಕಿರುಚಾಟದಿಂದ ಕೋಪಗೊಂಡ ಕಾಡಾನೆ, ಮನೆ ಮುಂಭಾಗದಲ್ಲಿ ನಿಲ್ಲಿಸಿದ್ದ ಆಲ್ಟೋ ಕಾರು ಎತ್ತಿ ಎಸೆದು ನಜ್ಜುಗುಜ್ಜು ಮಾಡಿದೆ. ಇದರಿಂದ ಗ್ರಾಮದಲ್ಲಿ ಕೆಲ ಕಾಲ ಭಯದ ವಾತಾವರಣ ನಿರ್ಮಾಣವಾಗಿತ್ತು. ಅಲ್ಲದೇ ಜನರು ಮನೆಯಿಂದ ಹೊರ ಬರಲು ಭಯಪಡುವ ಸ್ಥಿತಿ ನಿರ್ಮಾಣವಾಗಿತ್ತು. ಸ್ಥಳೀಯರು ಕೂಡಲೇ ಅರಣ್ಯ ಇಲಾಖೆ ಇಟಿಎಫ್ ಮತ್ತು ಆರ್‌ಆರ್‌ಟಿ ಸಿಬ್ಬಂದಿಗೆ ಮಾಹಿತಿ ನೀಡಿದ್ದರಿಂದ ತಕ್ಷಣ ಸ್ಥಳಕ್ಕಾಗಮಿಸಿ ಕಾಡಾನೆ ಮತ್ತೆ ಗ್ರಾಮದೊಳಗೆ ಬಾರದಂತೆ ಎಚ್ಚರ ವಹಿಸಿದ್ದಾರೆ.

ಬೇಲೂರು ತಾಲ್ಲೂಕು ಭಾಗದಲ್ಲಿ ಕಾಡಾನೆ ಕ್ಯಾಪ್ಟನ್ ಉಪಟಳ ಹೆಚ್ಚಾಗಿದ್ದು, ಈ ಹಿಂದೆ ಎರಡು ಬಾರಿ ಸೆರೆ ಹಿಡಿಯಲು ಪ್ರಯತ್ನಿಸಲಾಗಿತ್ತು. ವರ್ಷದ ಹಿಂದೆ ಕರಡಿ ಎಂಬ ಹೆಸರಿನ ಕಾಡಾನೆಯೊಂದಿಗೆ ಮನೆ ಮುಂದೆಯೇ ಕಾಳಗ ನಡೆಸಿ ಜನರಲ್ಲಿ ಭಯಸೃಷ್ಟಿಸಿತ್ತು. ಇದಾದ ಬಳಿಕ ಕರಡಿ ಹೆಸರಿನ ಕಾಡಾನೆಯನ್ನು ಸೆರೆ ಹಿಡಿದು ಸಾಕಾನೆ ಶಿಬಿರಕ್ಕೆ ಸಾಗಿಸಲಾಗುತ್ತು.

ಕೆಲ ದಿನಗಳ ಕಾಲ ಅಷ್ಟಾಗಿ ಕಾಣಿಸಿಕೊಳ್ಳದ ಕ್ಯಾಪ್ಟನ್ ಇದೀಗ ಏಕಾಏಕಿ ಗ್ರಾಮದೊಳಗೆ ನುಗ್ಗಿ ದಾಂಧಲೆ ನಡೆಸಿರುವುದು ಜನರಲ್ಲಿ ಆತಂಕ ಸೃಷ್ಟಿ ಮಾಡಿದೆ. ಹೀಗಾಗಿ ಕಾಡಾನೆಯನ್ನು ಸೆರೆಹಿಡು ಸ್ಥಳಾಂತರಿಸುವಂತೆ ಜನರು ಆಗ್ರಹಿಸಿದ್ದಾರೆ.

# ನಗರದಲ್ಲಿ ಇಂದು ರಕ್ತದಾನ ಅಭಿಯಾನ

ಹಾಸನ: ವಿಶ್ವ ಸಹೋದರತ್ವ ದಿನಾಚರಣೆ ಹಾಗೂ ರಾಜಯೋಗಿನಿ ಪ್ರಕಾಶಮಣಿ ಜೀ ಅವರ ಸ್ಮರಣಾರ್ಥ ನಗರದ ಸೀತಾರಾಂಜನೇಯ ದೇವಸ್ಥಾನದ ಆವರಣದಲ್ಲಿ ಆ.22 ರಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 3ರ ವರೆಗೆ ರಕ್ತದಾನ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಶಂಕರೀಪುರಂ ಸೇವಾ ಕೇಂದ್ರದ ಬ್ರಹ್ಮ ಕುಮಾರಿಸ್ ಬಿ.ಕೆ.ಶ್ವೇತಾ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈಶ್ವರಿ ವಿಶ್ವವಿದ್ಯಾಲಯದಿಂದ ಆ.25 ವಿಶ್ವ ಸಹೋದರತ್ತ ದಿನಾಚರಣೆಯ ವೇಳೆ ಮತ್ತು ನಮ್ಮ ಸಂಸ್ಥೆಯ ಪೂರ್ವ ಆಡಳಿತಧಿಕಾರಿ ಪ್ರಕಾಶಮಣಿ ಅವರ 18ನೇ ಪುಣ್ಯ ಸ್ಮರಣೆ ಅಂಗವಾಗಿ ಇಡೀ ವಿಶ್ವದಲ್ಲೇ ಬೃಹತ್ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದೆ. ಈ ಶಿಬಿರ ನೇಪಾಳ ಹಾಗು ಭಾರತಾದ್ಯಂತ ನಡೆಯುತ್ತಿದೆ ಎಂದರು.

ರಕ್ತಕ್ಕೆ ಬದಲಾಗಿ ಪರ್ಯಾಯ ವಸ್ತು ಯಾವುದು ಇಲ್ಲ. ರಕ್ತದಾನದ ಅವಶ್ಯಕತೆ ಬಹಳಷ್ಟಿದೆ. ರಕ್ತದಾನಕ್ಕೆ ನಾವು ಜೀವದಾನ ಮತ್ತು ಮಹಾಪುಣ್ಯ ಎಂದು ಹೇಳುತ್ತೇವೆ.

ರಕ್ತದಾನ ಎಂಬುದು ಮನುಷ್ಯನಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲದಂತಹ ಅಮುಲ್ಯ ಉಡುಗರೆ. ಹಾಗಾಗಿ 18 ವರ್ಷಕ್ಕೆ ಮೇಲ್ಪಟ್ಟವರು ರಕ್ತದಾನಕ್ಕೆ ಸಹಕರಿಸಿ ಮಾನವ ಸೇವೆ ಮುಂದಾಗುವಂತೆ ಕೋರಿದ ಅವರು, ಮಾಹಿತಿಗಾಗಿ 8618163651ಗೆ ಸಂಪರ್ಕಿಸಬಹುದು ಎಂದು ತಿಳಿಸಿದರು.

# ಕಾಫಿ ಬೆಳೆಗಾರರಿಗೆ ಪರಿಹಾರ ನೀಡುವಂತೆ ಒತ್ತಾಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಹಾಸನ: ಧಾರಾಕಾರ ಮಳೆಗೆ ಶೇ.50 ರಷ್ಟು ಕಾಫಿ ಬೆಳೆಗೆ ಹಾನಿಯುಂಟಾಗಿದೆ. ಬೆಳೆಗಾರರಿಗೆ ಉಂಟಾಗಿರುವ ನಷ್ಟಕ್ಕೆ ರಾಷ್ಟ್ರೀಯ ವಿಪತ್ತು ಯೋಜನೆ (ಎನ್ ಡಿಆರ್‌ಎಫ್) ಮತ್ತು ರಾಜ್ಯ ವಿಪತ್ತು ಯೋಜನೆ (ಎಸ್‌ಡಿಆರ್‌ಎಫ್)ಯಿಂದ ಸೂಕ್ತ ಪರಿಹಾರ ದೊರಕಿಸಿಕೊಡುವಂತೆ ಕರ್ನಾಟಕ ಬೆಳೆಗಾರರ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಂದ್ರ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಫಿ ಜೊತೆಗೆ ಮಲೆನಾಡಿನ ಪ್ರಮುಖ ಬೆಳೆಗಳಾದ ಕಾಳು ಮೆಣಸು ಮತ್ತು ಅಡಿಕೆ ಬೆಳೆಯಲ್ಲಿ ತೀವ್ರತರನಾಗಿ ಕೊಳೆರೋಗ ಕಂಡುಬಂದು ಅಪಾರ ಪ್ರಮಾಣದಲ್ಲಿ ಬೆಳೆ ಹಾನಿಯಾಗಿದೆ. ಜೊತೆಗೆ ಕಾಳುಮೆಣಸು ಬಳ್ಳಿಗಳು ಸಹ ರೋಗಕ್ಕೆ ತುತ್ತಾಗಿವೆ. ಆದ್ದರಿಂದ ಸರ್ಕಾರ ಕೂಡಲೇ ಸಂಕಷ್ಟದಲ್ಲಿರುವ ಕಾಫಿ ಬೆಳೆಗಾರರ ನೆರವಿಗೆ ಧಾವಿಸಬೇಕೆಂದು ಒತ್ತಾಯಿಸಿದರು.

ಕಾಫಿ ಬೆಳೆಯುವ ಹಾಸನ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಕಳೆದ ಮೇ ಮತ್ತು ಜೂನ್ ತಿಂಗಳಿನಲ್ಲಿ ನಿರಂತರವಾಗಿ ಸುರಿದ ಅತಿಯಾದ ಮಳೆಯಿಂದ ಕಾಫಿ ತೋಟದಲ್ಲಿ ಅಪಾರ ಪ್ರಮಾಣದಲ್ಲಿ ಕಾಫಿ ಫಸಲು ನಷ್ಟವಾಗಿದೆ. ಬೆಳೆಹಾನಿಗೆ ಸಂಬಂಧಿಸಿದಂತೆ ಈಗಾಗಲೇ ಕಾಫಿ ಮಂಡಳಿ ಅಧಿಕಾರಿಗಳು ಸಮೀಕ್ಷೆ ನಡೆಸಿ ವರದಿ ನೀಡಿದ್ದಾರೆ. ಈಗ ಮತ್ತೊಮ್ಮೆ ಕಂದಾಯ ಇಲಾಖೆ ಮತ್ತು ಕಾಫಿ ಮಂಡಳಿ ಮತ್ತು ತೋಟಗಾರಿಕ ಇಲಾಖೆ ಅಧಿಕಾರಿಗಳು ಶೀಘ್ರದಲ್ಲಿ ಕಾಫಿ ತೋಟಗಳಿಗೆ ಭೇಟಿ ನೀಡಿ ನಷ್ಟದ ಬಗ್ಗೆ ಜಂಟಿ ಸಮೀಕ್ಷೆ ನಡೆಸಿ ವರದಿ ತಯಾರಿಸಿ ಸರ್ಕಾರಕ್ಕೆ ವರದಿ ನೀಡಿ ಉಂಟಾಗಿರುವ ನಷ್ಟಕ್ಕೆ ಸೂಕ್ತ ಪರಿಹಾರ ದೊರಕಿಸಿಕೊಡಬೇಕು ಎಂದು ಆಗ್ರಹಿಸಿದರು.

ಮೇ ತಿಂಗಳಿನಿಂದಲೂ ಮಳೆ ನಿರಂತರವಾಗಿ ಮುಂದುವರೆದು ಕಳೆದ ಒಂದು ವಾರದಿಂದ ಶೀತ, ಗಾಳಿ ವಾತಾವರಣದಿಂದ ಕೂಡಿ ಅಪಾರ ಪ್ರಮಾಣದಲ್ಲಿ ಮಳೆ ಸುರಿಯುತ್ತಿದೆ. ಹೀಗಾಗಿ ಕಾಫಿ ಬೆಳೆಗಾರರು ತೀವ್ರ ಸಂಕಷ್ಟದಲ್ಲಿ ಸಿಲುಕಿದ್ದಾರೆ. ಈ ಹಿಂದೆ ಕಾಫಿ ನಷ್ಟದ ಪ್ರಮಾಣ ಸಮೀಕ್ಷೆ ನಡೆಸಿದ ನಂತರ ನಿರಂತರವಾಗಿ ಮಳೆ ಮುಂದುವರಿಕೆಯಿಂದ ಈಗ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕಾಫಿ ಬೆಳೆಯಲ್ಲಿ ನಷ್ಟ ಉಂಟಾಗಿದೆ. ಸರ್ಕಾರ ಈ ನಿಟ್ಟಿನಲ್ಲಿ ತೀವ್ರ ಕ್ರಮ ಕೈಗೊಂಡು ಅಧಿಕಾರಿಗಳಿಂದ ವರದಿ ಪಡೆದು ಬೆಳೆಗಾರರಿಗೆ ಉಂಟಾಗಿರುವ ನಷ್ಟಕ್ಕೆ ಸೂಕ್ತ ಪರಿಹಾರ ದೊರಕಿಸಿಕೊಡುವಂತೆ ಮನವಿ ಮಾಡಿದರು.

ಬೆಳೆಗಾರರ ಸಂಘದ ಅಧ್ಯಕ್ಷ ಹೆಚ್.ಬಿ. ಶಿವಣ್ಣ ಮಾತನಾಡಿ, ಮರ ಗಿಡಗಳ ಆಶ್ರಯದಲ್ಲಿ ಬೆಳೆಯುವ ಕಾಫಿ ತೋಟಗಳಲ್ಲಿ ಮರಗಳ ಎಲೆಗಳಿಂದ ಅತೀ ಹೆಚ್ಚಿನ ಪ್ರಮಾಣದಲ್ಲಿ ಗೊಬ್ಬರ ಭೂಮಿಗೆ ದೊರೆಯುತ್ತಿದೆ. ಇದರ ಜೊತೆಗೆ ಕಾಫಿ ತೋಟಗಳಲ್ಲಿ ರಸಗೊಬ್ಬರ ಬಳಕೆ ಅತಿಮುಖ್ಯವಾಗಿದೆ. ತೋಟಗಳಲ್ಲಿ ಸಿಂಪಡಣೆ ಮೂಲಕ ರಸಗೊಬ್ಬರ ಪೂರೈಕೆ ಕಷ್ಟಸಾಧ್ಯವಾಗಿದ್ದು, ಬುಡಕ್ಕೆ ರಸಗೊಬ್ಬರ ಹಾಕುವುದು ಅನಿವಾರ್ಯವಾಗಿದೆ. ಇದರಲ್ಲಿ ಬಹುಮುಖ್ಯವಾಗಿ ಯೂರಿಯಾ ಗೊಬ್ಬರವನ್ನು ಸಾಮಾನ್ಯವಾಗಿ ಬಳಕೆ ಮಾಡಲಾಗುತ್ತಿದ್ದು, ಈ ಸಾಲಿನಲ್ಲಿ ಯೂರಿಯಾ ಗೊಬ್ಬರದ ಕೊರತೆ ಹೆಚ್ಚಾಗಿ ಕಂಡುಬಂದಿದೆ. ಹಾಗಾಗಿ ಸರ್ಕಾರ ಬೆಳೆಗಾರರ ನೆರವಿಗೆ ಧಾವಿಸಿ ಯೂರಿಯಾ ಗೊಬ್ಬರವನ್ನು ದೊರಕಿಸಿಕೊಡಬೇಕು ಎಂದು ಒತ್ತಾಯಿಸಿದರು.

ಬೆಳೆಗಾರರ ಸಂಘದ ಉಪಾಧ್ಯಕ್ಷ ಬಿ.ಎಂ.ನಾಗರಾಜು, ಎ.ಎಸ್.ಪರಮೇಶ್, ಗಂಗಾಧರ್ ಯತೀಶ್, ಕೆ.ಬಿ.ಲೋಹಿತ್ ಇದ್ದರು.

# ಕಾಲು ತೊಳೆಯುವಕ್ಕೆ ನಾಲೆಗೆ ಇಳಿದಿದ್ದ ಮಹಿಳೆ ಜಲ ಸಮಾಧಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಚನ್ನರಾಯಪಟ್ಟಣ: ತಾಲ್ಲೂಕಿನ ಮಲ್ಲವನಘಟ್ಟ ನಾಲೆಯಲ್ಲಿ ಕಾಲು ತೊಳೆಯಲೆಂದು ತೆರಳಿದ್ದ ಮಹಿಳೆ ಕಾಲು ಜಾರಿ ಬಿದ್ದು ಜಲಸಮಾಧಿ ಆಗಿದ್ದಾರೆ.

ಪಟ್ಟಣದ ಗಾಯತ್ರಿ ಬಡಾವಣೆ ನಿವಾಸಿ ಎಸ್.ಟಿ. ಸಾವಿತ್ರಮ್ಮ(50) ಮೃತರು. ಎಲ್‌ಐಸಿ ಏಜೆಂಟರಾಗಿದ್ದ ಸಾವಿತ್ರಮ್ಮ ಬುಧವಾರ ಬೆಳಿಗ್ಗೆ ಗೌಡಗೆರೆ ಹೊಸೂರು ಗ್ರಾಮಕ್ಕೆ ತಮ್ಮ ದ್ವಿಚಕ್ರ ವಾಹನದಲ್ಲಿ ಕಾರ್ಯನಿಮಿತ್ತ ತೆರಳಿದ್ದರು. ಕೆಲಸ ಮುಗಿಸಿ ವಾಪಾಸ್ ಬರುತ್ತಿದ್ದಾಗ ಕಾಲಿಗೆ ಕೆಸರು ಮೆತ್ತಿಕೊಂಡಿದ್ದು ಅದನ್ನು ತೊಳೆದುಕೊಳ್ಳಲೆಂದು ಮಲ್ಲವ್ವನಘಟ್ಟ ಬಳಿ ಗಾಡಿ ನಿಲ್ಲಿಸಿ ನಾಲೆಯ ತಿರುವಿನ ಸಿಮೆಂಟ್ ಇಳಿಜಾರಿಗೆ ತೆರಳಿದ್ದರು.

ಕಾಲು ಜಾರಿ ನೀರಿಗೆ ಬಿದ್ದಿದ್ದರು. ಪತಿ ನಾಗರಾಜ್ ಹಾಗು ಸಂಬಂಧಿಕರು ಹುಡುಕಾಟಕ್ಕಾಗಿ ಹೊಸೂರು ಕಡೆಗೆ ತೆರಳುತ್ತಿದ್ದ ವೇಳೆ ನಾಲೆ ಬಳಿ ದ್ವಿಚಕ್ರ ವಾಹನ ಕಂಡಿದೆ. ನಾಲೆಯ ಬಳಿ ಚಪ್ಪಲಿ ಸಿಕ್ಕಿವೆ. ಗುರುವಾರ ಮಧ್ಯಾಹ್ನ 3 ಗಂಟೆಗೆ ಡಿಂಕ ಗ್ರಾಮದ ಬಳಿ ಮೃತದೇಹ ಪತ್ತೆಯಾಗಿದ್ದು ಶ್ರವಣಬೆಳಗೊಳ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು.

# ಲಕ್ಷಾಂತರ ಕುಟುಂಬಕ್ಕೆ ಬೆಳಕಾದ ದೇವರಾಜ ಅರಸು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಅರಕಲಗೂಡು: ದಿವಂಗತ ಡಿ.ದೇವರಾಜ ಅರಸು ಅವರು ಅನುಷ್ಠಾನಕ್ಕೆ ತಂದಿರುವ ಯೋಜನೆಗಳಿಂದ ಲಕ್ಷಾಂತರ ಬಡ ಜನರು ಸಮಾಜದಲ್ಲಿ ಉತ್ತಮ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಿದೆ ಎಂದು ತಹಶೀಲ್ದಾರ್ ಕೆ.ಸಿ. ಸೌಮ್ಯ ತಿಳಿಸಿದರು.

ಪಟ್ಟಣದ ಅರಸು ಭವನದಲ್ಲಿ ತಾಲೂಕು ಆಡಳಿತ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ನಡೆದ ದೇವರಾಜ ಅರಸು ಅವರು 110 ಜನ್ಮ ದಿನಾಚರಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರಸ್ತುತ ಎಲ್ಲಾ ಹಿಂದುಳಿದ ವರ್ಗಗಳ ಮಕ್ಕಳಿಗೆ ಸರ್ಕಾರಿ ಸವಲತ್ತು ದೊರೆಯುತ್ತಿವೆ. ಅಲ್ಲದೆ ಬಡವರು ಭೂಮಿ ಹೊಂದಲು ಸಾಧ್ಯವಾಗಿದೆ. ಇದಕ್ಕೆ ಪ್ರಮುಖ ಕಾರಣ ದೇವರಾಜ ಅರಸು ಅವರು ದೂರದೃಷ್ಠಿಯಿಂದ ಜಾರಿಗೆ ತಂದ ಕಾರ್ಯಕ್ರಮಗಳಾಗಿವೆ. ಮಹನೀಯರ ಜಯಂತಿಗಳಲ್ಲಿ ಭಾಗವಹಿಸುವ ಜತೆಗೆ ಅವರ ಆದರ್ಶಗಳನ್ನು ನಿತ್ಯವೂ ಅನುಕರಣೆ ಮಾಡಬೇಕಿದೆ. ಇಂದಿನ ಯುವ ಸಮುದಾಯದ ಮೇಲೆ ಮಹತ್ತರವಾದ ಸಮಾಜಮುಖಿ ಕರ್ತವ್ಯಗಳು ಇದ್ದು. ಇವುಗಳನ್ನು ಪಾಲನೆ ಮಾಡಬೇಕಿದೆ ಎಂದು ಹೇಳಿದರು.

ಶಿಕ್ಷಕ ಬಸವರಾಜು ಮಾತನಾಡಿ, ಅರಸು ಅವರ ರಾಜಕೀಯ ನಡೆ ಮತ್ತು ಮುಖ್ಯಮಂತ್ರಿಯಾಗಿ ರಾಜ್ಯಕ್ಕೆ ನೀಡಿರುವ ಜನಪರ ಕಾರ್ಯಕ್ರಮಗಳು ಎಂದೆಂದಿಗೂ ಪ್ರಸ್ತುತವಾಗಿವೆ. ಅವರ ಆಳ್ವಿಕೆಯಲ್ಲಿ ಜಾರಿಗೆ ತಂದ ಉಳುವವನೆ ಭೂಮಿಯ ಒಡೆತನದ ಹಕ್ಕಿನಿಂದ ಇಂದು ಲಕ್ಷಾಂತರ ಕುಟುಂಬಗಳು ಸ್ವಂತಃ ಭೂಮಿಯನ್ನು ಹೊಂದಿ ಬದುಕು ಕಟ್ಟಿಕೊಳ್ಳುವಂತ್ತಾಗಿದೆ. ಅಲ್ಲದೆ ಹಿಂದುಳಿದ ವರ್ಗಗಳ ಕಲ್ಯಾಣ ಕಾರ್ಯಕ್ರಮ ಕೂಡ ಇವರಿಂದಲೇ ಅನುಷ್ಠಾನಕ್ಕೆ ಬಂದಿದೆ. ಇವರ ರಾಜಕೀಯ ದೃಷ್ಟಿಕೋನ ಇಂದಿನ ರಾಜಕಾರಣಿಗಳಿಗೆ ಮಾರ್ಗದರ್ಶನವಾಗಿದೆ ಎಂದು ತಿಳಿಸಿದರು. ತಾಲ್ಲೂಕು ಹಿಂದುಳಿದ ವರ್ಗಗಳ ಸಂಘದ ಅಧ್ಯಕ್ಷ ಕೃಷ್ಣೇಗೌಡ ಮಾತನಾಡಿದರು. ಪಪಂ ಅಧ್ಯಕ್ಷ ಪ್ರದೀಪ್‌ಕುಮಾರ್, ಅಧಿಕಾರಿಗಳಾದ ಡಾ. ಪುಷ್ಪಲತಾ, ಸ್ವಾಮಿ, ರವಿಕುಮಾರ್, ಎಸ್.ಬಿ. ಉಳ್ಳಾಗಡ್ಡಿ, ನಾಗೇಂದ್ರಕುಮಾರ್, ಪ್ರಕಾಶ್, ವೆಂಕಟೇಶ್, ಸೋಮಶೇಖರ್, ಅಜಿತ್ ಕುಮಾರ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪುಟ್ಟರಾಜು ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ವಿವಿಧ ಇಲಾಖೆ ಅಧಿಕಾರಿ, ಸಿಬ್ಬಂದಿ, ಅಂಗನವಾಡಿ ಕಾರ್ಯಕರ್ತೆಯರು, ಶಾಲಾ ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ಭಾಗವಹಿಸಿದ್ದರು.

# ಇತಿಹಾಸದಲ್ಲಿ ಈ ದಿನ

## ಆಗಸ್ಟ್-22

1485: ಬೋಸ್ವರ್ಥ್ ಯುದ್ಧ, ಇಂಗ್ಲೆಂಡ್‌ನಲ್ಲಿ ರಿಚರ್ಡ್ ಸೋತು, ಹೆನ್ರಿ ಅಧಿಕಾರಕ್ಕೆ ಬಂದು ಟ್ಯೂಡರ್ ವಂಶದ ಪ್ರಾರಂಭವಾಯಿತು.

1642: ಇಂಗ್ಲೆಂಡ್‌ನ ರಾಜ ಚಾರ್ಲ್ಸ್ ಮತ್ತು ಸಂಸತ್ತಿನ ನಡುವಣ ಇಂಗ್ಲಿಷ್ ಗೃಹಯುದ್ಧ ಅಧಿಕೃತವಾಗಿ ಆರಂಭವಾಯಿತು.

1770: ಕ್ಯಾಪ್ಟನ್ ಜೇಮ್ಸ್ ಕುಕ್ ಆಸ್ಟ್ರೇಲಿಯಾದ ಪೂರ್ವ ಕರಾವಳಿಯನ್ನು ಬ್ರಿಟಿಷರಿಗಾಗಿ ಹಕ್ಕು ಮಾಡಿಕೊಂಡರು.

1864: ಜಿನೀವಾ ಒಪ್ಪಂದ ಮೇಲೆ 12 ರಾಷ್ಟ್ರಗಳು ಸಹಿ ಹಾಕಿದವು. ಅದರಿಂದ ಅಂತಾರಾಷ್ಟ್ರೀಯ ರೆಡ್ ಕ್ರಾಸ್ ಸಂಘಟನೆಗೆ ಅಡಿಪಾಯ ಬಿದ್ದಿತು.

1902: ಅಮೆರಿಕಾದ ಅಧ್ಯಕ್ಷ ಥಿಯೊಡರ್ ರೂಸವೆಲ್ಟ್ ಕಾರಿನಲ್ಲಿ ಪ್ರಯಾಣಿಸಿದ ಮೊದಲ ರಾಷ್ಟ್ರಪತಿ ಎನಿಸಿಕೊಂಡರು.

1947: ಭಾರತ ಸ್ವಾತಂತ್ರ್ಯ ಹೊಂದಿದ ಕೆಲವೇ ದಿನಗಳಲ್ಲಿ, ಪೂರ್ವ ಬಂಗಾಳ (ಇಂದಿನ ಬಾಂಗ್ಲಾದೇಶ)ದಲ್ಲಿ ಹಿಂದೂಗಳ ಮೇಲೆ ನಡೆದ ಗಲಭೆಯಲ್ಲಿ ನೂರಾರು ಮಂದಿ ಸಾವನ್ನಪ್ಪಿದರು.

1950: ಅಲ್ಟಾನ್ ಬ್ರೂಕ್ ಅಂಡ್ ಎಂಪೈರ್ (ಅಮೆರಿಕ) ಮೊದಲ ಬಾರಿಗೆ ಸೂಪರ್ಸೋನಿಕ್ ಫ್ಲೈಟ್ ಸಾಧಿಸಿತು.

1992: ಅಮೆರಿಕಾದಲ್ಲಿ ಹರಿಕೇನ್ ಆಂಡ್ರೂ ದಾಳಿಯಿಂದ ಭಾರೀ ಹಾನಿ, ಸಾವಿರಾರು ಜನರು ಗೃಹರಹಿತರಾದರು.

1639: ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ಮದ್ರಾಸ್ (ಇಂದಿನ ಚೆನ್ನೈ) ಪ್ರದೇಶ ದೊರೆತು, ಮುಂದಿನ ದಿನಗಳಲ್ಲಿ ಅದು ದೊಡ್ಡ ವ್ಯಾಪಾರ ಕೇಂದ್ರವಾಯಿತು.

1902: ಭಾರತದ ಮೊದಲ ಲೈಟ್‌ಹೌಸ್ ಮದ್ರಾಸ್ ಕರಾವಳಿಯಲ್ಲಿ ಕಾರ್ಯನಿರ್ವಹಣೆಗೆ ಆರಂಭವಾಯಿತು.

1931: ಭಾರತದ ಕ್ರಾಂತಿಕಾರಿ ಭಗತ್‌ಸಿಂಗ್‌ನ ಹೋರಾಟದ ಹಿನ್ನೆಲೆಯಲ್ಲಿ ದೇಶಾದ್ಯಂತ ಪ್ರತಿಭಟನೆಗಳು ಜೋರಾಗಿದ್ದ ದಿನ.

### ಜನನ

1862: ಕ್ಲಾಡ್ ಡೆಬಸ್ಸಿ, ಪ್ರಸಿದ್ಧ ಫ್ರೆಂಚ್ ಸಂಗೀತಗಾರ

1920: ದೆಂಗ್ ಶಿಯೋಪಿಂಗ್, ಚೀನಾದ ಪ್ರಖ್ಯಾತ ರಾಜಕೀಯ ನಾಯಕ

1925: ಅಲ್ವಿನ್ ಟೋಫ್ಲರ್, ಭವಿಷ್ಯವಾದಿ ಲೇಖಕ

1947: ಸಿಂಧು ತಾಯಿ ಸಪ್ಕಾಲ್, ಭಾರತೀಯ ಸಾಮಾಜಿಕ ಕಾರ್ಯಕರ್ತೆ

### ಮರಣ

1485: ರಿಚರ್ಡ್ , ಇಂಗ್ಲೆಂಡ್‌ನ ಕೊನೆಯ ಪ್ಲಾಂಟಜೆನೆಟ್ ರಾಜ

1904: ಕೇಟ್ ಶೋಪಿನ್, ಅಮೆರಿಕನ್ ಕಾದಂಬರಿಗಾರ್ತಿ

1989: ಉಸ್ತಾದ್ ಬಿಸ್ಮಿಲ್ಲಾ ಖಾನ್, ಪ್ರಸಿದ್ಧ ಶಹನಾಯಿ ವಾದಕ

# ಎಸ್.ಆರ್. ಆನಂದ್ ನಿಧನ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಪತ್ರಕರ್ತ ಎಸ್.ಎ. ರಘುನಂದನ್ ಅವರ ತಂದೆ ಎಸ್.ಆರ್. ಆನಂದ್ ಅವರು ಗುರುವಾರ ಬೆಳಿಗ್ಗೆ ನಿಧನರಾದರು.

ಕಳೆದ ಹಲವು ದಿನಗಳಿಂದ ವಯೋ ಸಹಜ ಅನಾರೋಗ್ಯದಿಂದ ಬಳಲುತ್ತಿದ್ದರು. ಸಂಜೆ 5 ಗಂಟೆ ನಂತರ ನಗರದ ಬಿಟ್ಟಗೋಡನಹಳ್ಳಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.

ಹಿಂದೆ ಲಾಟರಿ ಏಜೆನ್ಸಿ ನಡೆಸುತ್ತಿದ್ದ ಆನಂದ್ ಅವರು, ಕೆಲವು ವರ್ಷ ಹಾಸನ ಮಾಧ್ಯಮ ಪತ್ರಿಕೆಯ ಜಾಹೀರಾತು ವಿಭಾಗದಲ್ಲಿ ಕೆಲಸ ಮಾಡಿದ್ದರು. ಪತ್ನಿ, ಇಬ್ಬರು ಪುತ್ರರು, ಮೊಮ್ಮಕ್ಕಳು ಸೇರಿ ಅಪಾರ ಬಂಧು ಬಳಗ ಅಗಲಿದ್ದಾರೆ.

# ರೈತರಿಗೆ ಆಧುನಿಕ ಕೃಷಿ ಬಗ್ಗೆ ಮಾಹಿತಿ





ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ರೈತರ ಹಿತಾಸಕ್ತಿಗಾಗಿ ಆಧುನಿಕ ಕೃಷಿ ಪದ್ಧತಿ ಕಾರ್ಯಕ್ರಮವನ್ನು ಪಟ್ಟಣ ಸಮೀಪದ ರಾಯಪುರ ಗ್ರಾಮದಲ್ಲಿ' ಲಯನ್ಸ್ ಸಂಸ್ಥೆಯಿಂದ ಆಯೋಜಿಸಿ ರೈತರಿಗೆ ಮಾಹಿತಿ ನೀಡಲಾಯಿತು.

ಕಾರ್ಯಕ್ರಮದಲ್ಲಿ ರೈತರಿಗೆ ಕೃಷಿಯಲ್ಲಿ ಅಳವಡಿಸಿಕೊಳ್ಳಬಹುದಾದ ನೂತನ ತಂತ್ರಜ್ಞಾನ, ಆಧುನಿಕ ಯಂತ್ರೋಪಕರಣಗಳ ಬಳಕೆ ಹಾಗು ವೈಜ್ಞಾನಿಕ ವಿಧಾನಗಳ ಮೂಲಕ ಹೆಚ್ಚಿನ ಇಳುವರಿ, ಲಾಭ ಪಡೆಯುವ ಕುರಿತು ರೈತರಿಗೆ ಮಾಹಿತಿ ನೀಡಲಾಯಿತು. ವಿಶೇಷವಾಗಿ, ಗದ್ದೆಗಳಲ್ಲಿ ಸೂಕ್ತ ಬಿತ್ತನೆ ವಿಧಾನದೊಂದಿಗೆ ನೀರಾವರಿ ತಂತ್ರಜ್ಞಾನ, ಸಮರ್ಪಕ ಗೊಬ್ಬರ ಬಳಕೆ, ರೋಗ, ಕೀಟ ನಿಯಂತ್ರಣ ಮಾರ್ಗಗಳು ಭೂಮಿಯ ಫಲವತ್ತತೆ ಜೊತೆಗೆ ಯಾವ ಮಾದರಿ ಬೆಳೆ ಬೆಳೆಯಬೇಕು ಎಂಬುದನ್ನು ತಿಳಿಸಿಕೊಡಲಾಯಿತು.

ರೈತರು ಹೆಚ್ಚಿನ ಮಾಹಿತಿ ಪಡೆಯಲು ಕೃಷಿ ಇಲಾಖೆಯಲ್ಲಿನ ಮಾಹಿತಿಗಳನ್ನು ತಜ್ಞರು ಹಂಚಿಕೊಂಡರು. ಅಲ್ಲದೆ ಲಯನ್ಸ್ ಸಂಸ್ಥೆ ಸದಸ್ಯರು ರೈತರೊಂದಿಗೆ ಗದ್ದೆಳಿದು ಭತ್ತದ ಸಸಿ ನಾಟಿ ಮಾಡಿದರು.

# ಹೆದ್ದಾರಿ ಕಾಮಗಾರಿ: ಹೆಚ್ಚುವರಿ ಅನುದಾನಕ್ಕೆ ಮನವಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಬೇಲೂರು-ಹಾಸನ ರಾಷ್ಟ್ರೀಯ ಹೆದ್ದಾರಿ-373 ರ ಕಾಮಗಾರಿಗೆ ಹೆಚ್ಚುವರಿ ಅನುದಾನ ನೀಡುವಂತೆ ಸಂಸದ ಶ್ರೇಯಸ್ ಪಟೇಲ್ ಅವರು ನವದೆಹಲಿಯಲ್ಲಿ ಹೆದ್ದಾರಿ ಮತ್ತು ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಗೆ ಮನವಿ ಸಲ್ಲಿಸಿದರು. ಬೇಲೂರು-ಹಾಸನ ಭಾಗದ (ಪ್ಯಾಕೇಜ್ ) ರಾಷ್ಟ್ರೀಯ ಹೆದ್ದಾರಿ-373ನ್ನು ಚತುಷ್ಪಥ ಮಾರ್ಗವಾಗಿ ವಿಸ್ತರಿಸುವ ಮಹತ್ವದ ಕಾಮಗಾರಿ ಕೈಗೊಳ್ಳಲಾಗಿದೆ. ಕಾಮಗಾರಿಗೆ ಸಂಬಂಧಿಸಿದಂತೆ ತಿದ್ದುಪಡಿಸಿದ ವೆಚ್ಚದ ಅನುದಾನಕ್ಕೆ ಅನುಮೋದನೆ ಹಾಗೂ ಘೋಷಿಸುವಂತೆ ಕೋರಿದರು. ಈ ಯೋಜನೆಗಾಗಿ ಭೂಸ್ವಾಧೀನ ಪ್ರಕ್ರಿಯೆ ಬಹುತೇಕ ಪೂರ್ಣಗೊಂಡಿದ್ದು ತಿದ್ದುಪಡಿ ಮಾಡಿದ ವೆಚ್ಚಾನುದಾನ 723.83 ಕೋಟಿ ರೂ. ಆಗಿದೆ. ಈ ಯೋಜನೆ ಹಾಸನ ಜಿಲ್ಲೆ ಹಾಗು ಕರ್ನಾಟಕ ರಾಜ್ಯದ ಜನತೆಗೆ ಅತ್ಯಂತ ಮುಖ್ಯವಾಗಿದೆ. ಪ್ರಾದೇಶಿಕ ಸಂಪರ್ಕ ಸುಧಾರಿಸುವುದರ ಜೊತೆಗೆ ಬೇಲೂರು-ಹಾಸನ ನಡುವೆ ಸರಕು ಹಾಗೂ ಪ್ರಯಾಣಿಕರ ವೇಗದ ಸಂಚಾರಕ್ಕೆ ದೊಡ್ಡ ಅನುಕೂಲವಾಗಲಿದೆ. ಆದ್ದರಿಂದ ಶೀಘ್ರ ಅನುದಾನ ಕಲ್ಪಿಸುವಂತೆ ಮನವರಿಕೆ ಜೊತೆಗೆ ಮನವಿ ಮಾಡಿದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248